ಸಂತಸ ಪಡುವ ಭಾವನೆಯೇ ಮುಖ್ಯ ಎಂಬ ವಾಸ್ತವವನ್ನು ಆತ ತೆರೆದಿಟ್ಟಿದ್ದ.

ಹಾಗೆಯೇ ಒಂದು ವಿಷಯವಂತೂ ಅರ್ಥವಾಗದು. ಅದಕ್ಕೇಕೆ ಅರ್ಥ, ಅಂತರಾರ್ಥ ಹುಡುಕಬೇಕು ಎನ್ನಿಸಿದರೂ ಮನಸ್ಸು ಹಾಗೆಯೇ ಚಿಂತಿಸುತ್ತದಲ್ಲ... ಈ ಬಾಲನ್ ಇಷ್ಟು ಸಂಸ್ಕಾರವಂತನಾಗಿ ಬೆಳೆಯಲು ಹೇಗೆ ಸಾಧ್ಯ... ಹೀಗೆ ಯೋಚಿಸಿದರೆ ಆರ್ಥಿಕವಾಗಿ ಮೇಲ್ವರ್ಗದವರು ಮಾತ್ರ ಸಂಸ್ಕೃತಿಯ ವಾರಸುದಾರರು ಎಂಬ ವಿಶ್ಲೇಷಣೆ ಎಷ್ಟರ ಮಟ್ಟಿಗೆ ಸರಿ ಎಂಬ ವಿವೇಚನೆ ಎಚ್ಚರಿಸಿದರೂ ಮತ್ತೆ ಬಾಲನ್ ಪ್ರಶ್ನಾರ್ಥಕವಾಗಿಯೇ ನಿಲ್ಲುತ್ತಾನೆ. ಕೊಳೆಗೇರಿಯಲ್ಲಿ ಮನೆ, ಅವಿದ್ಯಾವಂತ ಅಪ್ಪಅಮ್ಮ, ಅದರಲ್ಲೂ ಕುಡಿತದ ಚಟ ಇರುವ ಅಪ್ಪ... ಅಣ್ಣಂದಿರಿದ್ದರೂ ಎಳೆವೆಯಲ್ಲಿಯೇ ದುಡಿಯಬೇಕಾದ ಪರಿಸ್ಥಿತಿ... ಚಿಕ್ಕ ವಯಸ್ಸಿನಲ್ಲೇ ಕೈಯಲ್ಲಿ ಹಣ ಓಡಾಡುವಂತಾದರೂ ಹಾಳು ಚಟಕ್ಕೆ ಬೀಳದೆ ಸಂಸಾರ ನಿರ್ವಹಣೆಗೆ ಹೆಗಲು ಕೊಟ್ಟಿರುವ ಬಾಲನ್.

ಹೀಗೆ ಬಾಲನ್ ವಿಷಯ ಯೋಚಿಸುವಾಗ ನಮ್ಮೂರ ಶಾಸ್ತ್ರಿಗಳ ಮಕ್ಕಳು, ಶಶಾಂಕ್ ಹಾಗೂ ಚಿರಾಗ್  ನೆನಪಾಗುತ್ತಾರೆ. ಅಪ್ಪ ಇದ್ದರೂ, ಅಪ್ಪನಿಗೆ ಒಳ್ಳೆಯ ಕೆಲಸವಿದ್ದರೂ ಮಕ್ಕಳು ಎಲ್ಲರ ಅನುಕಂಪಕ್ಕೆ ಒಳಗಾಗಬೇಕಾದ ಸ್ಥಿತಿ. ಒಟ್ಟಾರೆ ಮಕ್ಕಳ ಗ್ರಹಚಾರವೆನ್ನಬೇಕೇನೋ ಇದಕ್ಕೆ...

★★★

ಹೌದು... ಶಾಸ್ತ್ರಿಗಳ ನಿರಂತರ ಪೂಜೆ–ಮಂತ್ರ, ವೇದ ಪಠಣ, ಭಾಗವತ ಪಾರಾಯಣ ಇವುಗಳ ನಡುವೆಯೇ ಬೆಳೆದ ವೆಂಕಟೇಶ್... ಪತಿಗೆ ಒಪ್ಪುವ ಸತಿಯಂತೆ ಶಾಸ್ತ್ರಿಗಳಿಗೆ ಅನುಗುಣವಾಗಿಯೇ ನಡೆದುಕೊಳ್ಳುವ ಅಮ್ಮನ ವಿಪರೀತ ಮಡಿ. ಈರುಳ್ಳಿ, ಬೆಳ್ಳುಳ್ಳಿಗಳಿರಲಿ... ಕ್ಯಾರೆಟ್, ಬೀಟ್ರೂಟ್‌ನಂತಹ ತರಕಾರಿಗಳೂ ಮನೆಯಲ್ಲಿ ನಿಷೇಧ. ಹೀಗೆ ಆಚಾರದ ಪರಿಧಿಯೊಳಗೇ ಬೆಳೆದ ವೆಂಕಟೇಶ್ ಚೆನ್ನಾಗಿ ಓದಿ ದೊಡ್ಡ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದೂ ಆಯಿತು.

ಆಗಲೇ ಶುರುವಾದದ್ದು ಪರೀಕ್ಷೆ. ಒಂದು ರೀತಿಯಲ್ಲಿ ಪರೀಕ್ಷೆಯೆ...

ಕಂಪನಿಗೆ ಕಸ್ಟಮರ್ಸ್ ಬಂದಾಗ ಅಥವಾ ಎಂ.ಡಿ.ಯಂತಹ ದೊಡ್ಡ ಅಧಿಕಾರಿಗಳು ಬಂದಾಗ ಅವರೊಂದಿಗೆ ಪಾರ್ಟಿಗೆ ಹೋದಾಗ ನಡುಕ ಶುರುವಾಗುತ್ತಿತ್ತು ವೆಂಕಟೇಶ್‌ಗೆ. ಯಾವುದು ತಿನ್ನುವುದಕ್ಕೂ ಭಯ. ಬೇರೆಯವರ ಮುಸಿ ಮುಸಿ ನಗುವಿನ ಹಿನ್ನೆಲೆ ಬೇರೆ. 'ನಿನಗೆ ಪಾರ್ಟಿ ದಂಡಕ್ಕೆ... ಸುಖ ಪಡೋಕೂ ಕೇಳ್ಕೊಂಡು ಬಂದಿರ್ಬೇಕು... ಪುಳಿಚಾರು ಅನ್ನ, ಅದೇ ಇರಬಹುದು ನೋಡು... ನಿನಗೆ ಬಿಲ್ ಪೇ ಮಾಡೋದು ದಂಡ.' ಇಂತಹ ಟೀಕೆಗಳ ಮುಂದೆ ತೀರ ಸಣ್ಣವನಾಗಿ ತನ್ನ ಮೇಲೆಯೇ ತಿರಸ್ಕಾರದ ಭಾವ, ಕೀಳರಿಮೆ. ಇಂತಹವರ ಮುಂದೆ ದೊಡ್ಡವನೆನಿಸಿಕೊಳ್ಳಲು ಒಂದೆರಡು ಬಾರಿ ವಿಸ್ಕಿ ಗುಟುಕರಿಸಿ ಅದು ಹೇಗೆಹೇಗೋ ಆಗಿ ಅಭ್ಯಾಸ ಮಾಡಿಕೊಳ್ಳಲೇ ಬೇಕು ಎಂಬ ಹಟಕ್ಕೆ ಬಿದ್ದು ಕೊನೆಗೆ ಅದೇ ಚಟವಾಗಿ ಯಾವ ಹಂತಕ್ಕೆ ಬಂದಿತೆಂದರೆ, 'ಯಾಕೋ ಹೀಗಾಗ್ಬಿಟ್ಟಿದ್ದೀಯಾ... ಬೇಡ ಬಿಟ್ಬಿಡೋ... ನಿಮ್ಮ ಅಪ್ಪ ಅಮ್ಮನನ್ನು ನೋಡಿದರೆ ಅಯ್ಯೋ ಎನಿಸುತ್ತೆ,' ಎಂದು ಮೊದಲು ಕಿಚಾಯಿಸಿದ ಆ ಸಹೋದ್ಯೋಗಿಗಳೇ ಹೇಳುವಷ್ಟು ಪರಿಸ್ಥಿತಿ ವಿಷಮಿಸಿ ಕಂಪನಿಯ ಕೆಲಸಕ್ಕೇ ಕುತ್ತು ಬರುವಂತಾಗಿತ್ತು. ಕೊನೆಗೆ ವೆಂಕಟೇಶನ ತಾಯಿಯೇ ಬಾಸ್‌ನ ಬಳಿ ಬಂದು, 'ದಯವಿಟ್ಟು ಕೆಲಸದಿಂದ ಕಿತ್ತು ಹಾಕ್ಬೇಡಿ... ನಮಗೆ ಅವನೇ ದಿಕ್ಕು... ನಾನು ಅವನಿಗೆ ಬುದ್ಧಿ ಹೇಳ್ತೀನಿ...'